## 'ವಂದೇ ಮಾತರಂ' – ರಾಷ್ಟ್ರಗೀತೆಯಾಗಲಿ

ಕೇಂದ್ರ ಸರ್ಕಾರವು 'ಕ್ವಿಟ್ ಇಂಡಿಯಾ' ಚಳುವಳಿಯಸುವರ್ಣ ಮಹೋತ್ಸವವನ್ನು ಕಳೆದ ಅಗಸ್ಟ್ ೯ ರಂದು ವಿಜ್ರಂಭಣೆಯಿಂದ ಆಚರಿಸಿತು. ಅದಾದ ಒಂದು ವಾರದ ನಂತರ ೪೬ ನೇ ಸ್ವಾತಂತ್ರ್ಯೋತ್ಸವವನ್ನೂ ನಾವು ಆಚರಿಸಿದೆವು. ಆದರೆ, ಬ್ರಿಟಿಷರ ದಾಸ್ಯದಿಂದ ನಿಜವಾಗಿಯೂ ನಾವು ಮುಕ್ತರಾಗಿದ್ದೇವೆಯೇ? ಸ್ವತಂತ್ರ ಭಾರತದ ಸ್ವಾಭಿಮಾನಿ ಪ್ರಜೆಗಳಾಗಿದ್ದೇವೆಯೇ? ಎಂಬುದನ್ನು ಈ ಸಂದರ್ಭದಲ್ಲಿ ನಾವು ಪರಿಸಿಲಿಸಬೇಕು.

ರಾಷ್ಟ್ರಗೀತೆ ಹಾಗೂ ರಾಷ್ಟ್ರಧ್ವಜ ಒಂದು ದೇಶದ ಸ್ವಾಭಿಮಾನದ ಸಂಕೇತಗಳು. ಆದರೆ ನಮ್ಮ ರಾಷ್ಟ್ರಗೀತೆ ಹಾಗೂ ರಾಷ್ಟ್ರಧ್ವಜಗಳು ದೇಶಪ್ರೇಮದ ಪ್ರತೀಕವಾಗಿವೆಯೇ? ಖಂಡಿತ ಇಲ್ಲ. ಉದಾಹರಣೆಗೆ ನಮ್ಮ ರಾಷ್ಟ್ರಗೀತೆಯನ್ನು ತೆಗೆದುಕೊಳ್ಳೋಣ. ಇದರ ನಿಜವಾದ ಅರ್ಥವನ್ನು ಅರಿತವರು, ದೇಶದ ಬಗ್ಗೆ ಅಭಿಮಾನ ಹೊಂದುವ ಬದಲು ಕೀಳರಿಮೆ ಹೊಂದುವುದಂತೂ ಖಂಡಿತ. ಬಂಗಾಳಿ ಭಾಷೆಯಲ್ಲಿರುವ ನಮ್ಮ ರಾಷ್ಟ್ರಗೀತೆಯನ್ನು ನೋಬೆಲ್ ಪ್ರಶಸ್ತಿ ವಿಜೇತ ಕವಿ ರವೀಂದ್ರನಾಥ ಠಾಗೋರರು ರಚಿಸಿದ್ದರು. ನಮ್ಮ ರಾಷ್ಟ್ರಗೀತೆಯಲ್ಲಿ 'ಅಧಿನಾಯಕ ಜಯ ಹೇ, ಭಾರತ ಭಾಗ್ಯವಿಧಾತಾ' ಎಂಬ ನುಡಿ ಬರುತ್ತದೆ. ಈ 'ಅಧಿನಾಯಕ' ಬೇರ್‍ಯಾರೂ ಅಲ್ಲದೇ ಬ್ರಿಟಿಷ್ ದೊರೆ ಪಂಚಮ ಜಾರ್ಜ್ ಎಂಬುದು ಎಷ್ಟು ಜನರಿಗೆ ಗೊತ್ತಿದೆ? ಪಂಚಮ ಜಾರ್ಜ್ ರು ಸಾಮ್ರಾಟರಾಗಿ ೧೯೧೨ ರಲ್ಲಿ ಭಾರತಕ್ಕೆ ಆಗಮಿಸಿದಾಗ, ರವೀಂದ್ರನಾಥರು ಅವರನ್ನು ಸ್ವಾಗತಿಸಲು ರಚಿಸಿದ ಈ ಗೀತೆ, ಇಂದು ನಮ್ಮ 'ರಾಷ್ಟ್ರಗೀತೆ' ಯಾಗಿರುವುದು ಅವಮಾನಕಾರಿಯಲ್ಲವೇ? ಬ್ರಿಟಿಷ ರಾಜ ಪಂಚಮ ಜಾರ್ಜ್ ಭಾರತದ ಭಾಗ್ಯವಿದಾತನೆಂದು ಮುಕ್ತಕಂಠದಿಂದ ಹೊಗಳಿ, ನಂತರ 'ಭಾರತೀಯರನ್ನು ಆಳುತ್ತಿರುವ ಭಗ್ಯವಿಧಾತನಿಗೆಜಯವಾಗಲಿ', ಎಂದು ಈ ಗೀತೆ ಮುಕ್ತಾಯ ಗೊಳ್ಳುತ್ತದೆ. ನಮ್ಮ ಮುಂದುವರಿದ ಗುಲಾಮ–ಗಿರಿಗೆ ಇದಕ್ಕಿಂತ ದೊಡ್ಡ ಉದಾಹರಣೆ ಬೇಕೆ? ೨೧ನೆಯ ಶತಮಾನದತ್ತ ಸ್ವತಂತ್ರರಾಗಿ ದಿಟ್ಟ ಹೆಜ್ಜೆ ಇಡಬೇಕಾದ ನಾವು, ನಮ್ಮ ರಾಷ್ಟ್ರಗೀತೆಯಲ್ಲೇ ಗುಲಾಮಗಿರಿಯ ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ವಿಷಾದದ ಸಂಗತಿ. ಮೇಘಮಲ್ಲಾರ, ದೀಪಕರಾದ ಮುಂತಾದ ರಾಗಗಳನ್ನು ಹೊಂದಿ, ಜಗತ್ತಿನಲ್ಲೇ ವಿಖ್ಯಾತವಾದ ವೇದಮೂಲದ ಭಾರತೀಯ ಸಂಗೀತದ ಬದಲು 'ಜನಗಣಮನ' ಗೀತೆಗೆ ವಿದೇಶಿ ಇಂಗ್ಲೀಷ್ ಶೈಲಿಯ ಸ್ವರಗಳನ್ನು ಅಳವಡಿಸಲಾಗಿದೆ. ಸಂಗೀತಲ್ಲೂ ದಾಸ್ಯವೇ?

ಸ್ವಾತಂತ್ರ್ಯಪೂರ್ವದಲ್ಲಿ 'ವಂದೇಮಾತರಂ' ತಾರಕಮಂತ್ರವನ್ನು ಪಠಿಸಿ, ಸ್ವಾತಂತ್ರ್ಯಯೋಧರು ಬ್ರಿಟಿಷರ ದಬ್ಬಾಳಿಕೆಯನ್ನು ಯಶಸ್ವಿಯಾಗಿ ಎದುರಿಸಿದ್ದಾರೆ. ಈ ರಾಷ್ಟ್ರದ ನೆಲ–ಜಲದ ವೈಭವವನ್ನು ಮೆರೆಸಿ, ಪ್ರಜೆಗಳಲ್ಲಿ ರಾಷ್ಟ್ರಪ್ರೇಮವನ್ನು ಉಕ್ಕಿಸುವ ಈ 'ವಂದೇ ಮಾತರಂ' ನಮ್ಮ ರಾಷ್ಟ್ರಗೀತೆಯಾಗಬೇಕಿತ್ತು. ಆದರೆ ಜಾತೀಯ ಅಲ್ಪಸಂಖ್ಯಾತರ ಒತ್ತಡಕ್ಕೆ ಮಣಿದು, ಸ್ವಾತಂತ್ರೋತ್ತರ ನೆಹರೂ ಸರ್ಕಾರ 'ವಂದೇ ಮಾತರಂ'ನ್ನು ಕೈ ಬಿಟ್ಟು 'ಜನಗಣಮನ'ವನ್ನು ರಾಷ್ಟ್ರಗೀತೆಯಾಗಿ ಸ್ವೀಕರಿಸಿತು. ಕ್ವಿಟ್ ಇಂಡಿಯಾ ಚಳುವಳಿಯ ಸುವರ್ಣ ಮಹೋತ್ಸವದ ಈ ಶುಭಸಂದರ್ಭದಲ್ಲಿ ಗುಲಾಮಗಿರಿಯ ಸಂಕೇತವಾಗಿರುವ ಈ ಗೀತೆಯನ್ನು ತೊಲಗಿಸಿ, ಸ್ವಾಭಿಮಾನದ ಪ್ರತೀಕವಾಗಿರುವ 'ವಂದೇ ಮಾತರಂ' ಗೀತೆಯನ್ನು 'ರಾಷ್ಟ್ರಗೀತೆ'ಯನ್ನಾಗಿ ಅಂಗೀಕರಿಸಲು ಪಿ.ವಿ. ನರಸಿಂಹರಾಯರ ಸರ್ಕಾರವು ಮುಂದಾಗಬೇಕು.

Oct 18th 1992 Vikram Onde Matharam Rastrageetheyagali.